ನೋಂದಣಿ ಸಂಖ್ಯೆ: ಎಆರ್‌ಟಿ/ಸಿ/ಎಎಂಡಿ/5/1978-79
ದಿನಾಂಕ: 18-08-1978
ಆರ್‌ಬಿಐ ಲೈಸನ್ಸ್ ನಂ.ಯುಬಿಡಿ/ಕೆಎ/634ಪಿ
ದಿನಾಂಕ: 25-08-2003

**ತೆರೆದ-ಅಂಚೆ**

ದೂರವಾಣಿ: 0816-2279934
e-mail: vcbltkr@gmail.com

# ವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಚೇರಿ : ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ**
**ಬಿ.ಹೆಚ್.ರಸ್ತೆ, ತುಮಕೂರು - 572 102.**

## 2019 - 20 ನೇ ಸಾಲಿನ

# 42 ನೇ

# ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

**20 ಡಿಸೆಂಬರ್ 2020, ಭಾನುವಾರ**

ಅಂಚೆ ಸ್ವೀಕೃತಿ ಪಡೆದಿದೆ

ಶ್ರೀಮತಿ / ಶ್ರೀ ..............................................................................................

..........................................................................................................

..........................................................................................................

# ವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಚೇರಿ: ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ, ಬಿ.ಹೆಚ್.ರಸ್ತೆ, ತುಮಕೂರು-572 102.

## ಕಾರ್ಯಕಲಾಪಗಳು

01. ಪ್ರಾರ್ಥನೆ.
02. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವ ವಿಚಾರ.
03. ಸ್ವಾಗತ ಮತ್ತು 42ನೇ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
04. ಹಿಂದಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವುದು.
05. 2019-20ನೇ ಸಾಲಿನ ಆಡಳಿತ ವರದಿಯನ್ನು ಓದಿ ಅಂಗೀಕರಿಸುವುದು.
06. 2019-20ನೇ ಸಾಲಿನ ಬ್ಯಾಂಕಿನ ಆಡಿಟ್ ವರದಿ, ಜಮಾ-ಖರ್ಚು, ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ತ:ಖ್ತೆಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
07. 2019-20ನೇ ಸಾಲಿನಲ್ಲಿ ಬ್ಯಾಂಕು ಗಳಿಸಿರುವ ನಿವ್ವಳ ನಫೆಯನ್ನು ವಿಲೇವಾರಿ ಮಾಡುವುದು.
08. 2019-20ನೇ ಸಾಲಿನ ಆಯ-ವ್ಯಯದಲ್ಲಿ ಹೆಚ್ಚಿಗೆ ವೆಚ್ಚವಾಗಿರುವ ಮೊತ್ತಕ್ಕೆ ಮಹಾಸಭೆಯ ಅನುಮೋದನೆ ಪಡೆಯುವುದು.
09. 2020-21ನೇ ಸಾಲಿನ ಮುಂಗಡ (ಬಡ್ಜೆಟ್) ಪತ್ರಕ್ಕೆ ಮಂಜೂರಾತಿ ಪಡೆಯುವುದು.
10. 2020-21ನೇ ಸಾಲಿನ ಸನ್ನದ್ದು ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳುವುದು.
11. ಉಪವಿಧಿ (ಬೈಲಾ) ತಿದ್ದುಪಡಿ.
12. ಸದಸ್ಯರಿಂದ ಬಂದ ಪತ್ರಗಳ ಪರಿಶೀಲನೆ
13. ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರೆ ವಿಷಯಗಳು.
14. ಅಧ್ಯಕ್ಷರ ಭಾಷಣ.
15. ವಂದನಾರ್ಪಣೆ.

## ಸೂಚನೆ

01. ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳೇನಾದರೂ ಇದ್ದಲ್ಲಿ ಮತ್ತು 'ವೀಡಿಯೋ ಕಾನ್ಫರೆನ್ಸ್' ಮೂಲಕ ಮಾತನಾಡಲು ಇಚ್ಛಿಸುವ ಸದಸ್ಯರು ಮಾತನಾಡುವ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ದಿನಾಂಕ: 11.12.2020ರ ಶುಕ್ರವಾರ ಸಂಜೆ: 5-30 ಗಂಟೆಯೊಳಗೆ ಲಿಖಿತ ಮೂಲಕ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಆಡಳಿತ ಕಛೇರಿಯಲ್ಲಿರುವ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ನೀಡತಕ್ಕದ್ದು.
02. ಬ್ಯಾಂಕಿನಿಂದ ಸಾಲ ಪಡೆದು ಸುಸ್ತಿ ಆಗಿರುವ ಸದಸ್ಯರುಗಳು ಬ್ಯಾಂಕಿನ ಹಿತದೃಷ್ಟಿಯಿಂದ ಕಂತುಗಳು ಮತ್ತು ಸುಸ್ತಿ ಬಾಕಿಗಳನ್ನು ಸಕಾಲದಲ್ಲಿ ಪಾವತಿ ಮಾಡಿ ಬ್ಯಾಂಕಿನ ಪ್ರಗತಿಗೆ ಸಹಕರಿಸಲು ಕೋರಿದೆ.
03. ಬ್ಯಾಂಕಿನ ಸದಸ್ಯರು ಐದು (5) ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು (3) ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಸತತ 3 ಸಹಕಾರ ವರ್ಷಗಳವರೆಗೆ ಬೈಲಾ ಸಂಖ್ಯೆ: 20 ರಂತೆ ಕನಿಷ್ಠ ವ್ಯವಹಾರ ಮಾಡದಿದ್ದಲ್ಲಿ, ಅಂತಹ ಸದಸ್ಯರು ಬೈಲಾ ಸಂಖ್ಯೆ:19(2ಹೆಚ್) ಪ್ರಕಾರ ಮತ ನೀಡುವ ಹಕ್ಕು ಕಳೆದುಕೊಳ್ಳುತ್ತಾರೆ. ಆದ್ದರಿಂದ ಸದಸ್ಯರೆಲ್ಲರೂ ಕನಿಷ್ಠ ವ್ಯವಹಾರ ಮಾಡಲು ಕೋರಿದೆ.
04. ಸದಸ್ಯರ ವಿಳಾಸ ಬದಲಾವಣೆ ಆಗಿದ್ದಲ್ಲಿ ತಕ್ಷಣ ಆಡಳಿತ ಕಚೇರಿಗೆ ಲಿಖಿತಮೂಲಕ ತಿಳಿಸಲು ಕೋರಿದೆ.
05. 2019-20ನೇ ಸಾಲಿನ ಸರ್ವಸದಸ್ಯರ ಮಹಾಸಭೆಯ ವಾರ್ಷಿಕ ವರದಿಯನ್ನು ಮಾನ್ಯ ಸದಸ್ಯರು ಬ್ಯಾಂಕಿನ ಆಡಳಿತ ಕಚೇರಿಯಲ್ಲಿ ಪಡೆಯಬಹುದು.

## ವಿಶೇಷ ಸೂಚನೆ

1) **ಮಾನ್ಯ ಸದಸ್ಯರು ತಮ್ಮ ಮೊಬೈಲ್ ಮೂಲಕ ಆನ್‌ಲೈನ್ ಸಭೆಯಲ್ಲಿ ಪಾಲ್ಗೊಳ್ಳುವುದು. ಆದ್ದರಿಂದ ಬ್ಯಾಂಕಿನ ಮಾನ್ಯ ಸದಸ್ಯರುಗಳು ನಮ್ಮ ಬ್ಯಾಂಕಿನಲ್ಲಿ ಹೊಂದಿರುವ ಖಾತೆಗಳಿಗೆ ಮೊಬೈಲ್ ಸಂಖ್ಯೆಯನ್ನು ಮತ್ತು ಇ-ಮೇಲ್ ಐಡಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಮೊಬೈಲ್ ಸಂಖ್ಯೆಯನ್ನು ಮತ್ತು ಇ-ಮೇಲ್ ಐಡಿ ನಮೂದಿಸದೇ ಇರುವ ಸದಸ್ಯರುಗಳು ನಮೂದಿಸತಕ್ಕದ್ದು.**

2) **ಬ್ಯಾಂಕಿನ ಸದಸ್ಯರು ದಿನಾಂಕ 05-12-2020 ರಿಂದ ತಮ್ಮ ಮೊಬೈಲ್/ಕಂಪ್ಯೂಟರ್ ಮೂಲಕ https://bit.ly/vcbltkr2020 ಲಿಂಕನ್ನು ಉಪಯೋಗಿಸಿ ತಮ್ಮ ಹೆಸರು ಮತ್ತು ಸದಸ್ಯತ್ವ ಸಂಖ್ಯೆಯನ್ನು ನಮೂದಿಸಿ ರಿಜಿಸ್ಟರ್ ಮಾಡಿಕೊಳ್ಳುವುದು ಮತ್ತು ದಿನಾಂಕ : 20-12-2020 ರಂದು ನಡೆಯುವ ವಾರ್ಷಿಕ ಮಹಾಸಭೆಯಲ್ಲಿ ಲಾಗಿನ್ (Login) ಆಗುವ ಮೂಲಕ ಸಭೆಯಲ್ಲಿ ಭಾಗವಹಿಸುವುದು. ವಾರ್ಷಿಕ ಸಾಮಾನ್ಯ ಸಭೆಯ ದಿನದಂದು ಲಾಗಿನ್ (Login) ಆಗುವ ಸದಸ್ಯರಿಗೆ ಮಾತ್ರ ಹಾಜರಾತಿ ಎಂದು ಪರಿಗಣಿಸಲಾಗುವುದು.**

# ವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಚೇರಿ : ಡಾ|| ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ, ಬಿ.ಹೆಚ್.ರಸ್ತೆ, ತುಮಕೂರು-572 102.

Tel. 0816-2279934, e-mail : vcbltkr@gmail.com

ಶಾಖೆಗಳು

| | |
|---|---|
| (1) ಪ್ರಧಾನ ಕಚೇರಿ, ವಿವೇಕಾನಂದ ರಸ್ತೆ, ತುಮಕೂರು-1. | ☎ 0816-2278760 |
| (2) ಎ.ಪಿ.ಎಂ.ಸಿ. ಯಾರ್ಡ್, ಬಿ.ಹೆಚ್.ರಸ್ತೆ, ತುಮಕೂರು-2. | ☎ 0816-2252630 |
| (3) ವಿಜಯನಗರ (ಎಸ್.ಐ.ಟಿ.) ಬಡಾವಣೆ, ತುಮಕೂರು-2. | ☎ 0816-2274360 |
| (4) ಕುವೆಂಪು ರಸ್ತೆ, ಪಾವಗಡ-2. | ☎ 08136-244816 |
| (5) ಟಿ.ವಿ.ವಿ. ವೃತ್ತ, ಮಧುಗಿರಿ-2. | ☎ 08137-283221 |
| (6) ಎಪಿಎಂಸಿ ಯಾರ್ಡ್, ಯಶವಂತಪುರ, ಬೆಂಗಳೂರು-22. | ☎ 080-23479575 |
| (7) ಬಿ.ವಿ.ಕೆ.ಅಯ್ಯಂಗಾರ್ ರಸ್ತೆ, ಚಿಕ್ಕಪೇಟೆ, ಬೆಂಗಳೂರು-53. | ☎ 080-22389263 |
| (8) ನಂ.424, ಹಳೇ ಸಂತೇಪೇಟೆ, ಮೈಸೂರು-24. | ☎ 0821-2429595 |

# 42ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ

# ಆಹ್ವಾನ ಪತ್ರಿಕೆ

ಕೋವಿಡ್-19 ವೈರಸ್ ರೋಗವು ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿ ಅನ್ವಯ ಹೆಚ್ಚಿನ ಜನ ಒಂದೆಡೆ ಗುಂಪಾಗಿ ಸೇರುವಂತಿಲ್ಲದ ಕಾರಣ ಹಾಗೂ ಮುಖ್ಯವಾಗಿ ಬ್ಯಾಂಕಿನ ಸಮಸ್ತ ಸದಸ್ಯರ ಸುರಕ್ಷತೆಯ ದೃಷ್ಟಿಯಿಂದ ಬ್ಯಾಂಕಿನ **42ನೇ** ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಸರ್ಕಾರದ ಆದೇಶದನ್ವಯ ನೂತನ ಅವಿಷ್ಕಾರವಾಗಿ **"ವೀಡಿಯೋ ಕಾನ್ಫರೆನ್ಸ್"** ಮೂಲಕ

**ದಿನಾಂಕ: 20-12-2020ರ ಭಾನುವಾರ ಬೆಳಿಗ್ಗೆ: 10-30 ಗಂಟೆಗೆ**

ನಮ್ಮ ಬ್ಯಾಂಕಿನ ಅಧ್ಯಕ್ಷರಾದ

## ಶ್ರೀ ಕೆ.ಎನ್. ಗೋವಿಂದರಾಜು

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿದೆ

ಮಾನ್ಯ ಸದಸ್ಯರೆಲ್ಲರೂ ಲಾಗಿನ್ ಆಗಿ **"ವೀಡಿಯೋ ಕಾನ್ಫರೆನ್ಸ್"** ಮೂಲಕ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ನಿರ್ದೇಶಕ ಮಂಡಲಿಯ ಆದೇಶದ ಮೇರೆಗೆ

**ಸ್ಥಳ : ತುಮಕೂರು**

**ಎಂ.ಆರ್. ಅರವಿಂದ್**

ಮುಖ್ಯ ಕಾರ್ಯನಿರ್ವಹಣಾಧಿಕಾರಿ

**ದಿನಾಂಕ : 13-11-2020**

## ವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ., ಆಡಳಿತ ಕಚೇರಿ, ಬಿ.ಹೆಚ್.ರಸ್ತೆ, ತುಮಕೂರು-572102.
## ಬ್ಯಾಂಕಿನ ಉಪವಿಧಿ(ಬೈಲಾ) ತಿದ್ದುಪಡಿಗಳು

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| 1 | 4<br>4.38 | **ಪದಗಳ ಅರ್ಥ ವಿವರಣೆ :**<br>ಹೊಸ ಸೇರ್ಪಡೆ | **ಪದಗಳ ಅರ್ಥ ವಿವರಣೆ :**<br>**ನಿರ್ವಹಣಾ ಮಂಡಳಿಯ ರಚನೆ:-(Board of Management)**<br>"ನಿರ್ವಹಣಾ ಮಂಡಳಿ" ಎಂದರೆ ಆರ್.ಬಿ.ಐ ಸುತ್ತೋಲೆಯನ್ವಯ ರಚನೆಗೊಂಡ ಬ್ಯಾಂಕಿನ ಆಡಳಿತ ನಿರ್ವಹಣಾ ನಿಕಾಯವಾಗಿದ್ದು, ಇದರಲ್ಲಿ ಬ್ಯಾಂಕಿಂಗ್‌ನಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವಿಗಳನ್ನು ಒಳಗೊಂಡಿದ್ದು, ಆಡಳಿತ ಮಂಡಳಿಯು ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಸಹಕರಿಸುವುದು ಮತ್ತು ಬ್ಯಾಂಕಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ವೃತ್ತಿಪರವಾಗಿ ನಿರ್ವಹಿಸಲು ಹಾಗೂ ಕೇಂದ್ರೀಕೃತ ಗಮನ ಹರಿಸುವಂತೆ ಸುಗಮ ಮಾರ್ಗ ಮಾಡುವುದು ಎಂದಾಗಿದೆ.<br><br>ಬ್ಯಾಂಕಿನ ನಿರ್ವಹಣಾ ಮಂಡಳಿಯು ಕನಿಷ್ಠ ಐದು (ಮುಖ್ಯ ಕಾರ್ಯ ನಿರ್ವಾಹಕರನ್ನು ಹೊರತುಪಡಿಸಿ) ಹಾಗೂ ಗರಿಷ್ಠ 12 ಸದಸ್ಯರನ್ನು ಹೊಂದಿರತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮತದಾನದ ಅಧಿಕಾರ ಹೊಂದಿರದ ಸದಸ್ಯರಾಗಿರುತ್ತಾರೆ. | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರುವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |
| 2 | 53<br>53(1) | **ಮಂಡಲಿಯ ಸಭೆಗಳು :**<br>ಮಂಡಲಿ ಮತ್ತು ಉಪಸಮಿತಿಗಳ ಸಭೆಗಳನ್ನು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು; | **ಮಂಡಳಿಯ ಸಭೆಗಳು :**<br>ಆಡಳಿತ ಮಂಡಳಿ, **ನಿರ್ವಹಣಾ ಮಂಡಳಿ** ಹಾಗೂ ಉಪಸಮಿತಿಗಳ ಸಭೆಗಳು ಬ್ಯಾಂಕಿನ ನೋಂದಾಯಿತ ಕಚೇರಿಯಲ್ಲಿಯೇ ನಡೆಯತಕ್ಕದ್ದು. | |
| 3 | 61<br>61(3) | **ಮಂಡಳಿಯ ಕರ್ತವ್ಯಗಳು ಹಾಗೂ ಅಧಿಕಾರಗಳು:**<br>ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿ ಇಲ್ಲದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು. | **ಮಂಡಳಿಯ ಕರ್ತವ್ಯಗಳು ಹಾಗೂ ಅಧಿಕಾರಗಳು :**<br>ಸಾಮಾನ್ಯವಾಗಿ ಈ ಹಿಂದೆ ಹೇಳಿದವುಗಳಿಗೆ ಪೂರ್ವಾಗ್ರಹವಾಗದಂತೆ, ಅಂಥ ಅಧಿಕಾರಗಳು ಹಾಗೂ ಕರ್ತವ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು. | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| 4 | 61(3) (ಬಿಎಫ್) | ಬ್ಯಾಂಕಿನ ಸ್ಥಾಪನೆಯ ಉದ್ದೇಶಗಳನ್ನು ಸಾಧಿಸಲು ಅಗತ್ಯವಾದ / ಅನುಕೂಲವಾದ ಇತರ ಎಲ್ಲಾ ಕ್ರಮಗಳನ್ನು ತೆಗೆದು ಕೊಳ್ಳುವುದು. | **ನಿರ್ವಹಣಾ ಮಂಡಳಿ ಸದಸ್ಯರ ಕರ್ತವ್ಯಗಳು:–**<br>i) ನಿರ್ವಹಣಾ ಮಂಡಳಿಯ ಎಲ್ಲಾ ಸದಸ್ಯರು ಈ ಕೆಳಗೆ ಹೇಳಿದವುಗಳ ಪೈಕಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಹಾಗೂ ನುರಿತ ಅನುಭವ ಹೊಂದಿರುವ ವ್ಯಕ್ತಿಗಳನ್ನು ಒಳಗೊಂಡಿರ ತಕ್ಕದ್ದು.<br>ಎ) ಲೆಕ್ಕಶಾಸ್ತ್ರ ಬಿ)ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆ ಸಿ)ಬ್ಯಾಂಕಿಂಗ್, ಡಿ)ಸಹಕಾರ, ಇ)ಅರ್ಥಶಾಸ್ತ್ರ, ಎಫ್) ಹಣಕಾಸು ಜಿ)ಕಾನೂನು, ಹೆಚ್)ಸಣ್ಣಕೈಗಾರಿಕೆ, ಐ)ಮಾಹಿತಿ ತಂತ್ರಜ್ಞಾನ ಜೆ)ಭಾರತೀಯ ರಿಸರ್ವ್ ಬ್ಯಾಂಕಿನ ಅಭಿಪ್ರಾಯದಲ್ಲಿ ಸೂಕ್ತ ಎನಿಸುವ ಇನ್ನಿತರ ಯಾವುದೇ ವಿಷಯ.<br>ii) ನಿರ್ವಹಣಾ ಮಂಡಲಿಯ ಸದಸ್ಯರು ಆರ್.ಬಿ.ಐ. ನಿರ್ದೇಶನದಂತೆ ನಿಗಧಿಪಡಿಸಲಾದ ಯೋಗ್ಯ ಮತ್ತು ತಕ್ಕ **(Fit & Proper Criteria)** ಮಾನದಂಡವನ್ನು ಹೊಂದಿರತಕ್ಕದ್ದು.<br>iii) ಹಿಂದಿನ ಮೂರು ವರ್ಷಗಳಲ್ಲಿ ಬ್ಯಾಂಕಿನೊಂದಿಗೆ ವ್ಯವಹಾರಿಕ ಸಂಬಂಧ ಹೊಂದಿದ್ದ ಯಾವುದೇ ವ್ಯಕ್ತಿ ಸದಸ್ಯನಾಗಲು ಅರ್ಹನಾಗಿರತಕ್ಕುದಲ್ಲ. ಈ ಉದ್ದೇಶಕ್ಕಾಗಿ ಬ್ಯಾಂಕಿ ನೊಂದಿಗೆ ಠೇವಣಿ ಹೊಂದಿರುವ ವ್ಯಕ್ತಿಯನ್ನು ವ್ಯವಹಾರಿಕ ಸಂಬಂಧ ಹೊಂದಿದವನೆಂದು ವರ್ಗೀಕರಿಸುವಂತಿಲ್ಲ.<br>iv) ಆಡಳಿತ ಮಂಡಲಿ ಸದಸ್ಯರು ಆರ್.ಬಿ.ಐ ಸುತ್ತೋಲೆಯಲ್ಲಿ ನಿಗಧಿಪಡಿಸಲಾದ ಮಾನದಂಡಗಳನ್ನು ಹೊಂದಿದವರಾಗಿದ್ದರೆ ನಿರ್ವಹಣಾ ಮಂಡಲಿಗೆ ತೆಗೆದುಕೊಳ್ಳಬಹುದು ಆದರೆ ನಿರ್ವಹಣಾ ಮಂಡಲಿಯಲ್ಲಿ ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆ ಶೇ.50 ರಷ್ಟು ಮೀರತಕ್ಕದ್ದಲ್ಲ ಹಾಗೂ ಕನಿಷ್ಠ ಮೂರು (3) ನಿರ್ವಹಣಾ ಮಂಡಲಿಯ ಸದಸ್ಯರನ್ನು ಆಡಳಿತ ಮಂಡಳಿಯ ಸದಸ್ಯರನ್ನು ಹೊರತುಪಡಿಸಿ ತೆಗೆದುಕೊಳ್ಳತಕ್ಕದ್ದು. | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರು ವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| | | | v) ಆಡಳಿತ ಮಂಡಳಿಯಿಂದ ಪಡೆದುಕೊಂಡ ಸದಸ್ಯನನ್ನು ಹೊರತು ಪಡಿಸಿ ನಿರ್ವಹಣಾ ಮಂಡಲಿಯ ಸದಸ್ಯರು ಗರಿಷ್ಠ ಮೂರು ಬ್ಯಾಂಕುಗಳ ನಿರ್ವಹಣಾ ಮಂಡಲಿಯ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರುತ್ತಾನೆ. ಆದರೆ ಅಂತಹ ಬ್ಯಾಂಕುಗಳ ಕಾರ್ಯವ್ಯಾಪ್ತಿಯು ಒಂದರ ಮೇಲೆ ಇನ್ನೊಂದು ಅತಿಕ್ರಮಿಸಬಾರದು.<br>vi) ಕಾಯ್ದೆ ಹಾಗೂ ನಿಯಮಗಳಲ್ಲಿ ಆಡಳಿತ ಮಂಡಲಿ ಸದಸ್ಯನಿಗೆ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳು ನಿರ್ವಹಣಾ ಮಂಡಲಿಯ ಸದಸ್ಯರಿಗೂ ಅನ್ವಯವಾಗುತ್ತವೆ.<br>vii)ನಿರ್ವಹಣಾ ಮಂಡಳಿಯ ಅಧಿಕಾರಾವಧಿಯು ನಿರ್ದೇಶಕ ಮಂಡಳಿಯ ಅಧಿಕಾರಾವಧಿಯೊಂದಿಗೆ ಕೊನೆಗೊಳ್ಳತಕ್ಕದ್ದು.<br>viii) ನಿರ್ವಹಣಾ ಮಂಡಲಿಯ ಯಾವುದೇ ಸದಸ್ಯನು ರಿಸರ್ವ್ ಬ್ಯಾಂಕ್ ನಿರ್ಧಿಷ್ಟಪಡಿಸಿದ ಮಾನದಂಡಗಳನ್ನು ಪೂರೈಸುತ್ತಿಲ್ಲ ದಿದ್ದಲ್ಲಿ, ಅಥವಾ ಬ್ಯಾಂಕಿನ ಹಿತಾಸಕ್ತಿಗೆ, ಅಥವಾ ಠೇವಣಿದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವಂತೆ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥ ಸದಸ್ಯನನ್ನು ಭಾರತೀಯ ರಿಸರ್ವ್ ಬ್ಯಾಂಕು ವಜಾ ಮಾಡುವ ಅಧಿಕಾರ ಹೊಂದಿರತಕ್ಕದ್ದು. ನಿರ್ವಹಣಾ ಮಂಡಲಿಯ ಯಾವುದೇ ಸದಸ್ಯನನ್ನು ವಜಾ ಮಾಡುವ ಪೂರ್ವದಲ್ಲಿ, ನಿರ್ವಹಣಾ ಮಂಡಲಿಯ ಯಾವುದೇ ಸದಸ್ಯನು ನೀಡಿದ ರಾಜೀನಾಮೆ ಅಂಗೀಕರಿಸುವ ಪೂರ್ವದಲ್ಲಿ, ಆಡಳಿತ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕಿನ ಸಹಮತ ಪಡೆದು ಕೊಳ್ಳತಕ್ಕದ್ದು. ನಿರ್ವಹಣಾ ಮಂಡಲಿಯ ಕಾರ್ಯ ನಿರ್ವಹಣೆ ತೃಪ್ತಿಕರವಾಗಿಲ್ಲದಿದ್ದಲ್ಲಿ, ನಿರ್ವಹಣಾ ಮಂಡಲಿ ಯನ್ನು ವಜಾ ಮಾಡುವ ಅಧಿಕಾರ ಭಾರತೀಯ ರಿಸರ್ವ್ ಬ್ಯಾಂಕಿಗೆ ಇರತಕ್ಕದ್ದು. ನಿರ್ವಹಣಾ ಮಂಡಲಿಯ | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರು ವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| | | | ಸದಸ್ಯನನ್ನು ವಜಾ ಮಾಡಿದಾಗ ಅಥವಾ ನಿರ್ವಹಣಾ ಮಂಡಳಿಯನ್ನು ರದ್ದು ಗೊಳಿಸಿದಾಗ ಆಡಳಿತ ಮಂಡಳಿಯು ಅಂತಹ ಯಾವುದೇ ಪ್ರಕರಣದಲ್ಲಿ ಮೂರು ತಿಂಗಳ ಅವಧಿಯೊಳಗಾಗಿ ಹೊಸ ಸದಸ್ಯನನ್ನು ನೇಮಕ ಮಾಡತಕ್ಕದ್ದು, ಅಥವಾ ಹೊಸ ನಿರ್ವಹಣಾ ಮಂಡಲಿಯನ್ನು ರಚಿಸತಕ್ಕದ್ದು, ಈ ಸಂದರ್ಭದಲ್ಲಿ ಮಧ್ಯಂತರ ವ್ಯವಸ್ಥೆಯಾಗಿ ಆಡಳಿತ ಮಂಡಳಿಯು ನಿರ್ವಹಣಾ ಮಂಡಲಿಯ ಕಾರ್ಯಗಳನ್ನು ನಿರ್ವಹಿಸಬಹುದು. ನಿರ್ವಹಣಾ ಮಂಡಲಿಯು ಬ್ಯಾಂಕಿಂಗ್‌ಗೆ ಸಂಬಂಧಿಸಿದ ಕಾರ್ಯಗಳ ಮೇಲ್ವಿಚಾರಣೆ ಮಾಡತಕ್ಕದ್ದು, ಬ್ಯಾಂಕಿನ ಸುಗಮ ನಿರ್ವಹಣೆಗಾಗಿ ಆಡಳಿತ ಮಂಡಳಿ ತನಗೆ ನೀತಿರೂಪಿಸಲು ಅಥವಾ ಯಾವುದೇ ಸಂಬಂಧಿತ ವಿಷಯವಾಗಿ ವಿಶೇಷವಾಗಿ ನಿಯೋಜಿಸಿದಂತೆ ಆಡಳಿತ ಮಂಡಳಿಗೆ ಸಹಕರಿಸ ತಕ್ಕದ್ದು, ಸಾಲ ಸಮಿತಿಯು ನಿರ್ವಹಣಾ ಮಂಡಲಿಯ ಶಿಫಾರಸ್ಸುಗಳಿಗೆ ಭಿನ್ನಾಭಿಪ್ರಾಯ ಹೊಂದಿದ್ದಲ್ಲಿ, ಆ ವಿಷಯವನ್ನು ಆಡಳಿತ ಮಂಡಳಿಗೆ ಒಪ್ಪಿಸಬಹುದು. ಅಂಥಹ ಸಂದರ್ಭದಲ್ಲಿ ಆಡಳಿತ ಮಂಡಳಿಯು ನಿರ್ವಹಣಾ ಮಂಡಲಿಯ ಶಿಫಾರಸ್ಸುಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದಲ್ಲಿ ಅದು ತನ್ನ ಲಿಖಿತದಲ್ಲಿ ಕಾರಣಗಳನ್ನು ನಮೂದಿಸಿ ತೀರ್ಮಾನ ತೆಗೆದುಕೊಳ್ಳತಕ್ಕದ್ದು.<br>ix) ಬ್ಯಾಂಕಿನ ಆಡಳಿತ ಮಂಡಲಿಯು ನಿರ್ವಹಣಾ ಮಂಡಲಿಯ ಸದಸ್ಯರ ನೇಮಕಾತಿ ಸಂದರ್ಭದಲ್ಲಿ ಭಾರತೀಯ ರಿಸರ್ವ ಬ್ಯಾಂಕ್ ತನ್ನ ಸುತ್ತೋಲೆಯಲ್ಲಿ ಸೂಚಿಸಿರುವಂತೆ "ಅರ್ಹತೆ ಮತ್ತು ಯೋಗ್ಯತೆ" ಅಳತೆಗೋಲುಗಳನ್ನು ಅವನು/ಅವಳು ಪೂರೈಸಿರುವ ಬಗ್ಗೆ ಮುಖ್ಯಕಾರ್ಯನಿರ್ವಾಹಕ ಅಥವಾ ನಿರ್ವಹಣಾ ಮಂಡಲಿಯ ಸದಸ್ಯರಿಂದ ವಾಗ್ದಾನ ಸಮೇತ ಘೋಷಣಾ ಪತ್ರ(Declaration-cum-undertaking) ಪಡೆದು | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರುವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| | | | ಕೊಳ್ಳತಕ್ಕದ್ದು.<br>**ನಿರ್ವಹಣಾ ಮಂಡಲಿಯು ಕಾರ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು :**<br>ಎ) ಮಂಡಳಿ ಅಥವಾ ಯಾವುದೇ ಸಮಿತಿಗೆ ಮಂಡಿಸಿದ ಎಲ್ಲಾ ಸಾಲ ಮತ್ತು ಪ್ರಸ್ತಾವನೆಗಳ ಮೇಲೆ ನುರಿತ ಸಲಹೆ ನೀಡುವುದು.<br>ಬಿ) ಅನುತ್ಪಾದಕ ಖಾತೆಗಳ ವಸೂಲಾತಿಗಾಗಿ ಏಕಕಾಲಿಕ ತೀರುವಳಿ, ರಾಜೀ ತಿರುವಳಿ ಕ್ರಮಗಳಿಗಾಗಿ ನುರಿತ ಸಲಹೆ ಒದಗಿಸುವುದು ಮತ್ತು ಆ ಬಗ್ಗೆ ಗಮನಹರಿಸಲು ಮಂಡಲಿಗೆ ಸಹಕರಿಸುವುದು.<br>ಸಿ) ಬ್ಯಾಂಕಿನಲ್ಲಿ ನಿಧಿಗಳ ನಿರ್ವಹಣೆ ಹಾಗೂ ತೆಗೆದುಕೊಂಡ ಸಾಲಗಳ ಮೇಲ್ವಿಚಾರಣೆ ಮಾಡುವುದು.<br>ಡಿ) ಮಂಡಳಿ ಅನುಮೋದಿಸಿದ ನೀತಿಯನುಸಾರ ಬ್ಯಾಂಕಿನ ನಿಧಿಗಳ ಹೂಡಿಕೆ ಕುರಿತು ಪ್ರಸ್ತಾವನೆಗಳ ಶಿಫಾರಸ್ಸು ಮಾಡುವುದು.<br>ಇ) ಬ್ಯಾಂಕಿನ ಆಂತರಿಕ ನಿಯಂತ್ರಣಗಳು, ವ್ಯವಸ್ಥೆಗಳು ಹಾಗೂ ನಷ್ಟ ನಿರ್ವಹಣೆಗಳ ಮೇಲುಸ್ತುವಾರಿ ಮಾಡುವುದು.<br>ಎಫ್)ಬ್ಯಾಂಕಿನಲ್ಲಿ ಗಣಕೀಕರಣ ಕಾರ್ಯಗತಗೊಳಿಸುವಿಕೆ, ತಂತ್ರಜ್ಞಾನ ಅಳವಡಿಸಿಕೊಳ್ಳುವಿಕೆ, ಹಾಗೂ ಇತರೆ ಪ್ರಾಸಂಗಿಕ ವಿಷಯಗಳ ಮೇಲ್ವಿಚಾರಣೆ ಮಾಡುವುದು.<br>ಜಿ) ಆಂತರಿಕ ಲೆಕ್ಕಪರಿಶೋಧನೆ, ಅನುಪಾಲನೆಯೂ ಸೇರಿದಂತೆ ಪರಿವೀಕ್ಷಣಾ ಕಾರ್ಯಗಳ ಮೇಲುಸ್ತುವಾರಿ ಮಾಡುವುದು.<br>ಹೆಚ್) ದೂರು ನಿವಾರಣಾ ವ್ಯವಸ್ಥೆ ಮೇಲೆ ನಿಗಾ ಇರಿಸುವುದು.<br>ಐ) ಬ್ಯಾಂಕಿಂಗ್ ಕಾರ್ಯ ಸಂಬಂಧಿತವಾಗಿ ವಿಶದೀಕೃತವಾದ ಸಾಲ ನೀತಿ, ಹೂಡಿಕೆ ನೀತಿ, ವಸೂಲಾತಿ ನೀತಿ, ಎಎಲ್ಎಮ್ ಹಾಗೂ ನಷ್ಟ ನಿರ್ವಹಣೆ ಇತ್ಯಾದಿ ಕುರಿತು ರಿಸರ್ವ್ ಬ್ಯಾಂಕಿನ ಮಾರ್ಗ | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರುವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| | | | ಸೂಚಿಗಳಿಗೆ ಹೊಂದಾಣಿಕೆ ಇರುವಂತೆ ನೀತಿಗಳನ್ನು ರೂಪಿಸಲು ಮಂಡಳಿಗೆ ಸಹಾಯ ಮಾಡುವುದು.<br>ಜೆ) ಮಂಡಲಿಯಿಂದ ಅಧ್ಯರ್ಪಿತವಾದ ಇನ್ನಿತರ ಯಾವುದೇ ಜವಾಬ್ದಾರಿಗಳನ್ನು ನಿರ್ವಹಿಸುವುದು.<br>x) ನಿರ್ವಹಣಾ ಮಂಡಲಿಯು ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಅಗತ್ಯವಿದ್ದಾಗ, ಯಾವಾಗಲಾದರೂ ಸಭೆ ಸೇರಬಹುದು, ನಿರ್ವಹಣಾ ಮಂಡಲಿಯ ಅಧ್ಯಕ್ಷರನ್ನು ಆಡಳಿತ ಮಂಡಳಿಯು ನೇಮಕ ಮಾಡತಕ್ಕದ್ದು, ಆದಾಗ್ಯೂ ಮಂಡಳಿಯ ಅಧ್ಯಕ್ಷರನ್ನು ನಿರ್ವಹಣಾ ಮಂಡಲಿಯ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದಲ್ಲ. ಸಭೆಗೆ ಅಧ್ಯಕ್ಷರು ಗೈರುಹಾಜರಿದ್ದಲ್ಲಿ ನಿರ್ವಹಣಾ ಮಂಡಲಿಯ ಸದಸ್ಯರು ತಮ್ಮೊಳಗೆ ಒಬ್ಬರನ್ನು ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಸಭೆಯ ನಡುವಳಿಕೆಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು, ಮತ್ತು ಅದನ್ನು ಮಂಡಳಿಯ ಸಭೆಗೆ ಮಂಡಿಸತಕ್ಕದ್ದು.<br>xi) ನಿರ್ವಹಣಾ ಮಂಡಲಿಯ ಒಟ್ಟು ಸದಸ್ಯರ ಪೈಕಿ 2/3 ಸದಸ್ಯರು ಸಭೆಯ ಅಗತ್ಯ ಸಂಖ್ಯಾಬಲ (ಕೋರಂ) ಆಗಿರತಕ್ಕದ್ದು.<br>xii) ನಿರ್ವಹಣಾ ಮಂಡಲಿಯ ಸದಸ್ಯರು ಸಭೆಗಳಿಗೆ ಹಾಜರಾದಾಗ ಅವರಿಗೆ ಕೊಡಬಹುದಾದ ಸಭಾ ಭತ್ಯೆಗಳನ್ನು ಬ್ಯಾಂಕಿನ ಆಡಳಿತ ಮಂಡಲಿಯು ನಿರ್ಧರಿಸತಕ್ಕದ್ದು.<br>ಬ್ಯಾಂಕಿಂಗ್ ವ್ಯವಸ್ಥೆಯ ಉದ್ದೇಶಗಳು ಫಲಪ್ರದವಾಗಲು ಅಥವಾ ಪರಿಣಾಮಕಾರಿಯಾಗಿ ಈಡೇರಲು ಅವಶ್ಯವಿರುವ ಅಂತಹ ಇತರ ಯಾವುದೇ ಕ್ರಮಗಳನ್ನು ಕೈಗೆತ್ತಿಕೊಳ್ಳುವುದು. | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರುವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| 5 | 65 | **ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು :**<br>ಮುಖ್ಯಕಾರ್ಯನಿರ್ವಾಹಕನು ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಪಡೆದಿರುವಂತವನಾಗಿದ್ದು,ಕಾಯ್ದೆಯ ಕಲಂ 29ಜಿ ಪ್ರಕಾರ ಮಂಡಲಿಯಿಂದ ನೇಮಕವಾದ ಪೂರ್ಣಾವಧಿಯ ವೇತನ ಪಡೆಯುವ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಮುಖ್ಯ ಆಡಳಿತಾಧಿಕಾರಿಯಾಗಿರತಕ್ಕದು. ಮಂಡಲಿಯು ಆಗಿಂದಾಗ್ಗೆ ವಹಿಸುವ ಕರ್ತವ್ಯಗಳ ಜೊತೆಗೆ, ಆತನಕರ್ತವ್ಯ, ಅಧಿಕಾರಗಳು ಈ ಕೆಳಗಿನಂತೆ ಇರತಕ್ಕದ್ದು; | **ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು :**<br>ಮುಖ್ಯಕಾರ್ಯನಿರ್ವಾಹಕನು ಕಲಂ 29ಜಿ ಪ್ರಕಾರ, ಮಹಾಸಭೆ ಹಾಗೂ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಮಂಡಳಿಯಿಂದ ನೇಮಿಸಲ್ಪಟ್ಟ ಮುಖ್ಯಕಾರ್ಯನಿರ್ವಾಹಕ ಮತ್ತು ಮುಖ್ಯ ಆಡಳಿತಾತ್ಮಕ ಅಧಿಕಾರಿಯಾಗಿರತಕ್ಕದ್ದು. ಅವರು ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಯೋಗ್ಯ ಮತ್ತು ತಕ್ಕ (Fit & Proper Criteria) ಮಾನದಂಡವನ್ನು ಈ ಕೆಳಕಂಡಂತೆ ಹೊಂದಿರತಕ್ಕದ್ದು.<br>1) ಸಿಎಐಐಬಿ / ಡಿಬಿಎಫ್ / ಡಿಪ್ಲೋಮಾ ಇನ್–ಕೋ–ಆಪರೇಟಿವ್ ಬಿಸಿನೆಸ್ ಮ್ಯಾನೇಜಮೆಂಟ್ ಅಥವಾ ತತ್ಸಮಾನ ಅರ್ಹತೆ; ಅಥವಾ<br>2) ಚಾರ್ಟರ್ಡ್/ಕಾಸ್ಟ್ ಅಕೌಂಟೆಂಟ್;<br>3) ಯಾವುದೇ ಸ್ನಾತಕೋತ್ತರ ಪದವಿ,<br>35 ವರ್ಷಗಳಿಗಿಂತ ಕಡಿಮೆ ಇಲ್ಲದ ಮತ್ತು 70 ವರ್ಷ ಮೀರದ ವಯೋಮಿತಿಯವ ನಾಗಿರತಕ್ಕದ್ದು, ನೇಮಕಾತಿ ಸಂದರ್ಭದಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ ಹಿರಿಯ ಹಂತದಲ್ಲಿ ಕನಿಷ್ಠ ಎಂಟು ವರ್ಷಗಳ ಸೇವಾ ಅನುಭವ ಇರತಕ್ಕದ್ದು.<br>ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಅಳತೆಗೋಲು (ಮಾನದಂಡ) ಮುಖ್ಯಕಾರ್ಯನಿರ್ವಾಹಕನು ಪೂರೈಸದಿದ್ದಲ್ಲಿ, ಬ್ಯಾಂಕಿನ ಹಿತಾಸಕ್ತಿಗೆ ಅಥವಾ ಠೇವಣಿದಾರರಿಗೆ ಅಥವಾ ಇಬ್ಬರಿಗೂ | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರುವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣಗಳು |
|---|---|---|---|---|
| | | | ಮಾರಕವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಲ್ಲಿ ಅವನನ್ನು ತೆಗೆದುಹಾಕುವ (ವಜಾ ಮಾಡುವ) ಅಧಿಕಾರ ರಿಸರ್ವ್ ಬ್ಯಾಂಕಿಗೆ ಇರತಕ್ಕದ್ದು. ಹಾಗೆ ಮುಖ್ಯ ಕಾರ್ಯನಿರ್ವಾಹಕನನ್ನು ತೆಗೆದುಹಾಕಿದ / ವಜಾಮಾಡಿದ ಮೂರು ತಿಂಗಳ ಒಳಗಾಗಿ ಹೊಸ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕಾತಿ ಮಾಡತಕ್ಕದ್ದು. ಮಂಡಳಿಯು ಮುಖ್ಯ ಕಾರ್ಯ ನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ / ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು; ಅವನು, | ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ : RBI/2019-20/128/DOR/(PCB)BPD.Cir. No.8/12.05.002/2019-20, dated 31 December 2019 ರ ಪಟ್ಟಣ ಸಹಕಾರ ಬ್ಯಾಂಕಿನ ಠೇವಣಿ ಗಾತ್ರ ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ನಿರ್ದೇಶಕ ಮಂಡಲಿ (BoD) ಯೊಂದಿಗೆ ನಿರ್ವಹಣಾ ಮಂಡಲಿ (BoM) ರಚಿಸುವುದು ಕಡ್ಡಾಯವಾಗಿರುವುದರಿಂದ ಸದರಿ ತಿದ್ದುಪಡಿ ಪ್ರಸ್ತಾಪಿಸಿದೆ |
| 6 | 65(9) | ಸಾಮಾನ್ಯ ನಿಕಾಯದ, ಮಂಡಲಿಯ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು, ಸದರಿ ಸಭೆಗಳಲ್ಲಿ ಅಗತ್ಯಪಡಿಸುವ ಕಾಗದಪತ್ರಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸಭಾಪತಿಯೊಡನೆ ಅಂತಹ ಸಭೆಗಳ ನಡೆವಳಿಗಳಿಗೆ ಸಹಿ ಮಾಡತಕ್ಕದ್ದು; | ಸಾಮಾನ್ಯ ನಿಕಾಯದ, ಮಂಡಲಿಯ, ನಿರ್ವಹಣಾ ಮಂಡಲಿಯ, ಮತ್ತು ಉಪಸಮಿತಿಯ ಎಲ್ಲಾ ಸಭೆಗಳಿಗೆ ಹಾಜರಿರತಕ್ಕದ್ದು, ಹಾಗೂ ಅಂಥ ಸಭೆಗಳಿಗೆ ಅಗತ್ಯವಿರುವ ಎಲ್ಲಾ ಕಾಗದ ಪತ್ರಗಳನ್ನು ಹಾಗೂ ಮಾಹಿತಿಯನ್ನು ಹಾಜರುಪಡಿಸತಕ್ಕದ್ದು, ಮತ್ತು ಅಧ್ಯಕ್ಷರೊಂದಿಗೆ ಅಂಥ ಸಭೆಯ ನಡುವಳಿಗಳಿಗೆ ಸಹಿ ಮಾಡತಕ್ಕದ್ದು; | |
| 7 | 65(46) | ಬ್ಯಾಂಕಿನ ನೀತಿಗಳ, ಉದ್ದೇಶಗಳ ಮತ್ತು ಯೋಜನೆಯ ರಚನೆಯಲ್ಲಿ ಮಂಡಲಿಗೆ ಅಗತ್ಯ ನೆರವು ನೀಡುವುದು; | ಬ್ಯಾಂಕಿನ ನೀತಿಗಳನ್ನು, ಉದ್ದೇಶಗಳನ್ನು ಹಾಗೂ ಯೋಜನೆ ರೂಪಿಸಲು ಮಂಡಳಿ ಹಾಗೂ ನಿರ್ವಹಣಾ ಮಂಡಲಿಗೆ ಸಹಕರಿಸತಕ್ಕದ್ದು; | |

# ವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಚೇರಿ : ಡಾ|| ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ
ಬಿ.ಹೆಚ್.ರಸ್ತೆ, ತುಮಕೂರು - 572 102.

## ನಿರ್ದೇಶಕ ಮಂಡಲಿ

**ಶ್ರೀ ಕೆ.ಎನ್.ಗೋವಿಂದರಾಜು**
ಅಧ್ಯಕ್ಷರು

CA **ಕೆ.ಎಸ್.ರಾಮ ಮೂರ್ತಿ** B.Com., FCA, DISA
ಉಪಾಧ್ಯಕ್ಷರು

## ನಿರ್ದೇಶಕರು

ಶ್ರೀ ಕೆ.ಪಿ.ಸುರೇಶ್

CA ಎಂ.ನಾಗಸುಂದರ್, B.Com., FCA, DISA

ಶ್ರೀ ಬಿ.ಎಸ್.ಲೋಕನಾಥ್

ಶ್ರೀ ಟಿ.ಎಸ್.ಪ್ರಸೂನ್ ಮಾಕಂ

ಶ್ರೀ ಎನ್.ವಿ.ಬಾಲಾಜಿ

ಶ್ರೀ ಎನ್.ಎ.ಅರುಣ್ ಕುಮಾರ್

ಶ್ರೀ ಕೆ.ವೆಂಕಟರಾಜು

ಶ್ರೀ ಬಿ.ಎ.ಲಕ್ಷ್ಮೀಕಾಂತ ಶೆಟ್ಟಿ

ಶ್ರೀ ಟಿ.ನರಸಿಂಹ ಮೂರ್ತಿ

ಶ್ರೀ ಕೆ.ಆರ್.ರಾಜಶೇಖರ್

ಶ್ರೀ ಸಿ.ಎಸ್.ಸಂಜಯ್

ಶ್ರೀ ಡಿ.ಎಲ್.ಲಕ್ಷ್ಮೀಪತಿ

ಶ್ರೀ ಟಿ.ಎ.ಪಾರ್ಥಸಾರಥಿ

ಶ್ರೀ ಎಲ್.ಎ.ರಾಘವೇಂದ್ರ

ಶ್ರೀಮತಿ ಸಿ.ಬಿ.ಕನಕಲಕ್ಷ್ಮೀ

ಶ್ರೀಮತಿ ಗೀತಾ ಬಾಲರಾಜು

ಶ್ರೀ ಎಂ.ಆರ್. ಅರವಿಂದ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ